9

# ಯೇಸುವಿನ ಸಭೆ: ಆರಾಧನೆ

# (1)

ಸಂಘಟನೆಯು ದೇಹದ ಅಸ್ತಿಪಂಜರವಾದರೆ ಆರಾಧನೆಯು ಹೃದಯವಾಗಿದೆ. "ನೀನು ನಿನ್ನ ದೇವರಾದ ಕರ್ತನನ್ನು ಮಾತ್ರ ಆರಾಧಿಸಿ ಆತನೊಬ್ಬನನ್ನೇ ಸೇವಿಸಬೇಕು" (ಮತ್ತಾಯ 4:10ಬಿ).

ಆರಾಧನೆಯ ಎರಡು ಮುಖ್ಯಾಂಶಗಳು: ಏನು ಮಾಡಲ್ಪಡುತ್ತದೆ ಮತ್ತು ಹೇಗೆ ಮಾಡಲ್ಪಡುತ್ತದೆ. "... ನಿಜವಾದ ಆರಾಧಕರು ತಂದೆಯನ್ನು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸುವ ಗಳಿಗೆಯು ಬರುತ್ತದೆ, ಅದು ಈಗಲೇ ಬಂದಿದೆ; ಯಾಕಂದರೆ ತನ್ನನ್ನು ಆರಾಧಿಸುವದಕ್ಕೆ ತಂದೆಯು ಅಂಥವರನ್ನು ಹುಡುಕುತ್ತಾನೆ. ದೇವರು ಆತ್ಮನಾಗಿದ್ದಾನೆ; ಆತನನ್ನು ಆರಾಧಿಸುವವರು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸಬೇಕು" (ಯೋಹಾನ 4:23, 24) ಎಂದು ಯೇಸು ಸಮಾರ್ಯದ ಸ್ತ್ರೀಗೆ ಹೇಳಿದನು. "ಆತ್ಮದಲ್ಲಿ" ದೇವರನ್ನು ಆರಾಧಿಸುವುದು ಅಂದರೆ ಒಬ್ಬನು ಹೃದಯದಿಂದ ಅರಾಧಿಸುವುದು ಎಂದರ್ಥ. ನಿಜವಾದ ಆರಾಧಕರು ತಾವು ಮಾಡುತ್ತಿರುವುದರ ಬಗ್ಗೆ ಯೋಚಿಸುವರು. ತಮ್ಮ ವಿಚಾರಗಳನ್ನು ಪರಲೋಕದ ಕಡೆಗೆ ಇಡುವರು. "ಸತ್ಯದಲ್ಲಿ" ದೇವರನ್ನು ಆರಾಧಿಸುವುದು ಆತನು ತನ್ನ ವಾಕ್ಯದಲ್ಲಿ ಆದೇಶಿಸಿದಂತೆ ಆತನನ್ನು ಆರಾಧಿಸುವದನ್ನು ಒಳಗೊಂಡಿರುವುದು. ಯಾಕಂದರೆ ದೇವರ "ವಾಕ್ಯವು ಸತ್ಯವಾಗಿದೆ" ಎಂದು ಯೇಸು ಹೇಳಿದ್ದಾನೆ (ಯೋಹಾನ 17:17).

ಈ ಪಾಠದಲ್ಲಿಯೂ ಮುಂದಿನ ಪಾಠದಲ್ಲಿಯೂ ಯೇಸುವಿನ ಸಭೆಯಲ್ಲಿ ಆರಾಧನೆಯ ಬಗ್ಗೆ ಪರಿಶುದ್ಧ ಬರಹಗಳು ಏನನ್ನು ಬೋಧಿಸುತ್ತವೆ ಎಂಬದನ್ನು ಪರೀಕ್ಷಿಸೋಣ. ನಾವು ಹಾಗೆ ಮಾಡುವಾಗ, ಆರಾಧನೆಯ "ಏನು" ಮತ್ತು "ಹೇಗೆ" ಎಂಬ ಎರಡನ್ನು ಒತ್ತಿ ಹೇಳುತ್ತೇವೆ. ದೇವರ ಆರಾಧನೆಯು ಸರಿಯಾದ ಕೃತ್ಯಗಳನ್ನೂ ಸರಿಯಾದ ಮನೋಭಾವನೆಗಳನ್ನೂ ಒಳಗೊಂಡಿರತಕ್ಕದ್ದು.

## ಆರಾಧನೆಯ ವಿಶೇಷ ದಿನ

ವಾರದ ಮೊದಲನೆಯ ದಿನ ನಾವು ದೇವರನ್ನು ಆರಾಧಿಸಬಹುದು. ಸಭೆಯು ಮೊದಲು ಸ್ಥಾಪಿಸಲಪಟ್ಟಾಗ ಕ್ರೈಸ್ತರು ಪ್ರತೀ ದಿನ ಕೂಡಿಬರುತ್ತಿದ್ದರು (ಅಪೊಸ್ತಲರ ಕೃತ್ಯ 2:46). ಹೀಗಿದ್ದರೂ ಹೊಸ ಒಡಂಬಡಿಕೆಯು ಆರಾಧನೆಗಾಗಿ ಎಲ್ಲಾ ಕ್ರೈಸ್ತರು ಒಂದಾಗಿ ಕೂಡಿ ಬರಲು ವಾರದಲ್ಲಿ ಒಂದು ವಿಶೇಷ ದಿನವಿದೆಯೆಂದು ಬೋಧಿಸುತ್ತದೆ.

ಹಳೇ ಒಡಂಬಡಿಕೆಯಲ್ಲಿ ಆರಾಧನೆಯ ವಿಶೇಷ ದಿನವು ಸಬ್ಬತ್ ದಿನವಾಗಿತ್ತು. ಅದು ವಾರದ ಏಳನೆಯ ದಿನವಾಗಿತ್ತು (ವಿಮೋಚನಕಾಂಡ 20:10, 11). ಅದು ಶನಿವಾರವಾಗಿತ್ತು. ಕ್ರೈಸ್ತತ್ವದಲ್ಲಿ, ವಿಶೇಷ ದಿನವು ವಾರದ ಮೊದಲನೆಯ ದಿನ - ಭಾನುವಾರ. ಇದು ಯೇಸು ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದ ದಿನವಾಗಿತ್ತು

(ಮತ್ತಾಯ 28:1, 6). ಇದು ಆದಿ ಕ್ರೈಸ್ತರು ಕೂಡಿ ಬರುತ್ತಿದ್ದ ದಿನವಾಗಿತ್ತು (1 ಕೊರಿಂಥ 16:2), ಆ ದಿನ ಅವರು ಕರ್ತನ ಭೋಜನದಲ್ಲಿ ಭಾಗವಹಿಸಿದರು (ಅಪೊಸ್ತಲರ ಕೃತ್ಯ 20:7). ಭಾನುವಾರವು "ಕರ್ತನ ದಿನ" ಎಂದು ಕರೆಯಲ್ಪಡುತ್ತದೆ (ಪ್ರಕಟನೆ 1:10).[1]

ಆರಾಧನೆಯ ಐದು ವ್ಯಕ್ತ ಪಡಿಸುವಿಕೆಗಳನ್ನು ನಾವು ಅಧ್ಯಯನ ಮಾಡಲಿಕ್ಕಿದ್ದೇವೆ. ಇವುಗಳಲ್ಲಿ ಮೂರನ್ನು ಯಾವುದೇ ದಿನದಂದು ಮಾಡಬಹುದು: ಬೈಬಲ್ ಅಧ್ಯಯನೆ, ಪ್ರಾರ್ಥನೆ ಮತ್ತು ಸಂಗೀತ. ವಾರದ ಮೊದಲನೆಯ ದಿನಕ್ಕೆ ಎರಡು ಮಾತ್ರ ಸಂಬಂದಿಸಿವೆ: ಕರ್ತನ ಭೋಜನ ಮತ್ತು ಕೊಡುವಿಕೆ.

## ಆರಾಧನೆಯ ವ್ಯಕ್ತಪಡಿಸುವಿಕೆಗಳು

### ಕರ್ತನ ಭೋಜನ

ನಾವು ಯೋಚಿಸಲು ಬಯಸುವ ಆರಾಧನೆ ಮೊದಲನೆಯ ವ್ಯಕ್ತಪಡಿಸುವಿಕೆಯು ಕರ್ತನ ಭೋಜನ. ಯೇಸು ತನ್ನ ಶಿಷ್ಯರೊಂದಿಗಿನ ತನ್ನ ಕೊನೆಯ ಪಸ್ಕ[2] ಭೋಜನದಲ್ಲಿ ಕರ್ತನ ಭೋಜನವನ್ನು ಸ್ಥಾಪಿಸಿದನು.

> ... ಕರ್ತನಾದ ಯೇಸು ತಾನು ಹಿಡಿದು ಕೊಡಲ್ಪಟ್ಟ ರಾತ್ರಿಯಲ್ಲಿ ರೊಟ್ಟಿಯನ್ನು ತೆಗೆದುಕೊಂಡು ದೇವರ ಸ್ತೋತ್ರ ಮಾಡಿ ಮುರಿದು - ಇದು ನಿಮಗೋಸ್ಕರವಾಗಿರುವ ನನ್ನ ದೇಹ; ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಹೀಗೆ ಮಾಡಿರಿ ಅಂದನು. ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು - ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ; ನೀವು ಇದರಲ್ಲಿ ಪಾನ ಮಾಡುವಾಗೆಲ್ಲಾ ನನ್ನನ್ನು ನೆನಸಿಕೊಳ್ಳುವದ ಕ್ಕೋಸ್ಕರ ಪಾನ ಮಾಡಿರಿ ಅಂದನು. ನೀವು ಈ ರೊಟ್ಟಿಯನ್ನು ತಿಂದು ಈ ಪಾತ್ರೆಯಲ್ಲಿ ಪಾನ ಮಾಡುವಷ್ಟು ಸಾರಿ ಕರ್ತನ ಮರಣವನ್ನು ಆತನು ಬರುವತನಕ ಪ್ರಸಿದ್ಧಿ ಪಡಿಸುತ್ತೀರಿ. ಹೀಗಿರುವದರಿಂದ ಯಾವನಾದರೂ ಅಯೋಗ್ಯವಾಗಿ[3] ಕರ್ತನ ರೊಟ್ಟಿಯನ್ನು ತಿಂದರೆ ಇಲ್ಲವೇ ಆತನ ಪಾತ್ರೆಯಲ್ಲಿ ಪಾನ ಮಾಡಿದರೆ ಅವನು ಕರ್ತನ ದೇಹಕ್ಕೂ ರಕ್ತಕ್ಕೂ ದ್ರೋಹ ಮಾಡಿದವನಾಗಿರುವನು. ಪ್ರತಿ ಮನುಷ್ಯನು ತನ್ನನ್ನು ಪರೀಕ್ಷಿಸಿ ಕೊಂಡವನಾಗಿ ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ (1 ಕೊರಿಂಥ 11:23-28).[4]

ಭೋಜನವನ್ನು ಸ್ಥಾಪಿಸುವಲ್ಲಿ ಯೇಸುವು ಹುಳಿಯಿಲ್ಲದ ರೊಟ್ಟಿಯನ್ನು[5] ಮತ್ತು ದ್ರಾಕ್ಷಾರಸವನ್ನು[6] ಉಪಯೋಗಿಸಿದನು. ಭೋಜನದ ಮೊದಲನೆಯ ಆಚರಣೆಯಲ್ಲಿ ಭಾಗವಹಿಸಿದವರು ರೊಟ್ಟಿ, ದ್ರಾಕ್ಷಾರಸ ಎರಡರಲ್ಲಿಯೂ ಪಾಲುಗಾರರಾದರು.[7]

ಯೇಸು "ಇದು ನನ್ನ ದೇಹ" ಎಂದು ಹೇಳಿದಾಗ ರೊಟ್ಟಿಯು ರಹಸ್ಯವಾಗಿಯೂ ಮಾಂತ್ರಿಕವಾಗಿಯೂ ಆತನ ಮಾಂಸವಾಗಿ ಬದಲಾಗಿದೆ ಎಂಬರ್ಥದಲ್ಲಿ ಹೇಳಲಿಲ್ಲ. ಆತನು ಅವರ ಮುಂದೆ ನಿಂತು ಕೊಂಡಿದ್ದನು. ಆತನ ದೇಹವು ಅಖಂಡವಾಗಿತ್ತು, ನಾನು ಒಂದು ಫೋಟೋವನ್ನು ತೆಗೆದು ಕೊಂಡು "ಇಲ್ಲಿ ನನ್ನ ಮೊಮ್ಮಕ್ಕಳು" ಎಂದು ಹೇಳುವಾಗ ನನ್ನ ಅರ್ಥ ಏನಾಗಿರುವುದೋ ಅದು ಆತನ ಅರ್ಥವಾಗಿತ್ತು. ಚಿತ್ರವು ನನ್ನ ಮೊಮ್ಮಕ್ಕಳ ಬಿಂಬವಾಗಿತ್ತು, ಹಾಗೆಯೇ ಹುಳಿಯಿಲ್ಲದ ರೊಟ್ಟಿಯು ಕ್ರಿಸ್ತನ

ದೇಹದ ಬಿಂಬ (ಚಿತ್ರ)ದಂತೆ ಇತ್ತು, ಮತ್ತು ದ್ರಾಕ್ಷಾರಸವು ಆತನ ರಕ್ತವನ್ನು ಪ್ರತಿನಿಧೀಕ ರಿಸುತ್ತದೆ.

ಕರ್ತನ ಭೋಜನವು ಕೆಲವು ಸಲ "ಕಮ್ಯೂನಿಯನ್" (1 ಕೊರಿಂಥ 10:16; KJV[8]) ಇಲ್ಲವೇ "ಕರ್ತನ ಪಂಕ್ತಿ (ಮೇಜು)" (1 ಕೊರಿಂಥ 10:21) ಎಂದು ಕರೆಯಲ್ಪಟ್ಟಿದೆ. ಹುಳಿಯಿಲ್ಲದ ರೊಟ್ಟಿಯನ್ನು ಆರಾಧಕರು ಮುರಿಯುವದರಿಂದ ಇದು ಪ್ರಾರಂಭವಾಗುವದರಿಂದ ಆರಾಧನೆಯ ಈ ವ್ಯಕ್ತಪಡಿಸುವಿಕೆಯು "ರೊಟ್ಟಿ ಮುರಿಯುವುದು"[9] ಎಂದೂ ತಿಳಿಯಲ್ಪಟ್ಟಿದೆ. ಪ್ರಥಮ ಕ್ರೈಸ್ತರು "... ರೊಟ್ಟಿ ಮುರಿಯುವದರಲ್ಲಿಯೂ ... ನಿರತರಾಗಿದ್ದರು" (ಅಪೊಸ್ತಲರ ಕೃತ್ಯಗಳು 2:42).

ಹೊಸ ಒಡಂಬಡಿಕೆಯ ಸಭೆಯು ಪ್ರತಿವಾರದ ಮೊದಲನೆಯ ದಿನದಂದು ಕರ್ತನ ಭೋಜನದಲ್ಲಿ ಭಾಗವಹಿಸಿತು. ಸಭೆಯು ಪ್ರತೀ ಮೊದಲನೆಯ ದಿನ ಕೂಡಿಬರುತ್ತಿತ್ತು (1 ಕೊರಿಂಥ 16:1, 2 ನೋಡಿರಿ). ಅವರ ಆರಾಧನೆಯು ಕರ್ತನ ಭೋಜನದ ಆಚರಣೆಯ ಸುತ್ತ ಇತ್ತು. ಅಪೊಸ್ತಲರ ಕೃತ್ಯ 20ರಲ್ಲಿ ಪೌಲ, ಲೂಕ ಹಾಗೂ ಇತರರು ತ್ರೋವಕ್ಕೆ ಬಂದು ತಲುಪಿದರೆಂದು ಓದುತ್ತೇವೆ. "ವಾರದ ಮೊದಲನೆಯ ದಿವಸದಲ್ಲಿ ನಾವು ರೊಟ್ಟಿ ಮುರಿಯುವ ನಿಯಮಕ್ಕಾಗಿ ಕೂಡಿ ಬಂದಾಗ ... ಪೌಲನು ಅವರಿಗೆ ಪ್ರಸಂಗಿಸುತ್ತಾ ... ಉಪಾನ್ಯಾಸ ನಡಿಸಿದನು" (ಅಪೊಸ್ತಲರ ಕೃತ್ಯ 20:7) ಎಂದು ಲೂಕನು ಅನಂತರ ಬರೆದನು. ತ್ರೋವದಲ್ಲಿಯ ಸಭೆಯು ವಾರದ ಮೊದಲನೆಯ ದಿನದಂದು ಕೂಡಿ ಬಂದಾಗ ಅವರ ಪ್ರಥಮ ಉದ್ದೇಶವು ರೊಟ್ಟಿಯನ್ನು ಮುರಿಯುವದಾಗಿತ್ತು. ಸಭೆಯ ಮೊದಲಿನ ಶತಮಾನಗಳಲ್ಲಿಯ ಕ್ರೈಸ್ತರ ಬರಹಗಳು ಇದು ಅನೇಕ ವರ್ಷಗಳ ವರೆಗೆ ರೂಢಿಯಾಗಿ ಮುಂದುವರಿಯಿತು ಎಂಬುದನ್ನು ಸೂಚಿಸುತ್ತವೆ. ಕ್ರೈಸ್ತರು ವಾರದ ಪ್ರತೀ ಮೊದಲನೆಯ ದಿನದಂದು ಕೂಡಿ ಬಂದಾಗ ಅವರ ಪ್ರಥಮ ಕಾರ್ಯವು ಕರ್ತನ ಭೋಜನ.

ಕರ್ತನ ಭೋಜನದ ಆಚರಣೆಯಲ್ಲಿ ದೇವರನ್ನು ಮೆಚ್ಚಿಸಲು ಸರಿಯಾದ ಸಂಗತಿಗಳನ್ನು ಮಾಡುವುದು ಮುಖ್ಯವಾದದ್ದಾಗಿದೆ: ಕ್ರೈಸ್ತರು ಹುಳಿಯಿಲ್ಲದ ರೊಟ್ಟಿಯಲ್ಲಿಯೂ ದ್ರಾಕ್ಷಾರಸದಲ್ಲಿಯೂ ಪಾಲುಗಾರರಾಗಬೇಕು ಮತ್ತು ಇದನ್ನು ಪ್ರತೀ ವಾರದ ಮೊದಲನೆಯ ದಿನದಂದು ಮಾಡಬೇಕು! ಸರಿಯಾದ ರೀತಿಯಲ್ಲಿ ಭಾಗವಹಿಸುವುದೂ ಮುಖ್ಯ, ಯೇಸುವಿನ ಯಜ್ಞದ ಮೇಲೆಯೂ ಆ ಯಜ್ಞವು ಅವರಿಗೆ ಏನಾಗಿದೆ ಎಂಬುದರ ಮೇಲೆಯೂ ಆರಾಧಕರು ತಮ್ಮ ವಿಚಾರಗಳನ್ನು ಕೇಂದ್ರೀಕರಿಸಬೇಕು (ಪುನಃ ಓದಿರಿ 1 ಕೊರಿಂಥ 11:26-29).

**ದೇವರ ವಾಕ್ಯ**

ಕರ್ತನ ಭೋಜನಕ್ಕಾಗಿ ತ್ರೋವದ ಸಭೆಯವರು ಕೂಡಿ ಬಂದಿದ್ದರು. ಪೌಲನು ದೇವರ ಚಿತ್ತದ ಬಗ್ಗೆ ಮಾತಾಡಿದನು (ಅಪೊಸ್ತಲರ ಕೃತ್ಯ 20:7).[10] ದೇವರ ವಾಕ್ಯವನ್ನು ಪ್ರಸಂಗಿಸುವುದು ಇಲ್ಲವೇ ಬೋಧಿಸುವುದು ದೇವರ ಹತ್ತಿರ ಬರಮಾಡುವ ಮುಖ್ಯ ಮಾರ್ಗವಾಗಿದೆ. ಆದಿ ಸಭೆಯು ವಾಕ್ಯವು ಓದಲ್ಪಡುವದನ್ನು ಇಲ್ಲವೇ ಚರ್ಚಿಸಲ್ಪಡುವದನ್ನು ಕೇಳಲು ಆಗಾಗಿ ಕೂಡಿ ಬರುತ್ತಿತ್ತು (ಅಪೊಸ್ತಲರ ಕೃತ್ಯ 2:42; ಕೊಲೊಸ್ಸೆ 4:16).

ಬಹಿರಂಗ ಆರಾಧನೆಯಲ್ಲಿ ಪ್ರಸಂಗಿಸುವದರ ಮೇಲೆ ಕೆಲವು ಮಿತಿಗಳನ್ನು ಬೈಬಲ್ ಹಾಕುತ್ತದೆ. ದೇವರ ವಾಕ್ಯವು ಪ್ರಸಂಗಿಸಲ್ಪಡಬೇಕು. ಮನುಷ್ಯರ ಅಭಿಪ್ರಾಯಗಳನ್ನಾಗಲೀ ತತ್ವ ಜ್ಞಾನಗಳನ್ನಾಗಲೀ ಅಲ್ಲ (2 ತಿಮೊಥೆ 4:1-4).[11] ಬಹಿರಂಗ ಕೂಟಗಳಲ್ಲಿ ಕೇವಲ

ಪುರುಷರು ಪ್ರಸಂಗಿಸಬೇಕು ಇಲ್ಲವೇ ಬೋಧಿಸಬೇಕು (1 ಕೊರಿಂಥ 14:34).[12]

ಪ್ರಸಂಗ ಇಲ್ಲವೇ ಬೋಧನೆಯ ಪರಿಶುದ್ಧ ಬರಹ “ಯಾವುದು” ಎಂಬುದನ್ನು ಕೇವಲ  ಗಮನಿಸುವದಷ್ಟೇ ಸಾಲದು. ದೇವರನ್ನು ಮೆಚ್ಚಿಸುವ ಪ್ರಸಂಗವನ್ನು ಪ್ರಸಂಗಿಯು ಪ್ರಸಂಗಿಸುತ್ತಾನೆಂಬ ಸಂಗತಿಯು ಪ್ರತಿಯೊಬ್ಬ ಆಲಿಸುವವನೂ ಆರಾಧಿಸುವನೆಂಬ ಭರವಸೆಕೊಡುವದಿಲ್ಲ. ಆರಾಧನೆಯು ಕೇಳುಗರ ಹೃದಯದಲ್ಲಿ ನಡೆಯತಕ್ಕದ್ದು. ಪ್ರಸಂಗಿಸುವಕೆಯಿರುವ ಆರಾಧನೆಯಲ್ಲಿ ಬಾಗವಹಿಸುವವರು ಜಾಗರೂಕತೆಯಿಂದ ಕೇಳುತ್ತ ತಮ್ಮ ಸ್ವಂತ-ಜೀವಿತಕ್ಕೆ ಅನ್ವಯಿಸಿಕೊಳ್ಳುತ್ತ ಭಾಗವಹಿಸಬೇಕು.

## ಪ್ರಾರ್ಥನೆ

ಆರಾಧೆನೆಯ ಪ್ರಮುಖ ಭಾಗವು ಪ್ರಾರ್ಥನೆ. “ಎಡಬಿಡದೆ ಪ್ರಾರ್ಥಿಸಿರಿ” (1 ಥೆಸಲೋನಿಕ 5:17) ಎಂದು ಪೌಲನು ಥೆಸಲೋನಿಕದ ಕ್ರೈಸ್ತರಿಗೆ ಹೇಳಿದನು. ನಾವು ಬೈಬಲನ್ನು ಓದುವಾಗ ದೇವರು ನಮ್ಮ ಕೂಡ ಮಾತಾಡುತ್ತಾನೆ. ನಾವು ಪ್ರಾರ್ಥಿಸುವಾಗ ದೇವರೊಂದಿಗೆ ಮಾತಾಡುತ್ತೇವೆ. ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರು ಒಟ್ಟಾಗಿ ಕೂಡಿ ಬಂದಾಗ ಅವರು ಪ್ರಾರ್ಥಿಸಿದರು (ಅಪೊಸ್ತಲರ ಕೃತ್ಯ 2:42; 4:23, 24; 6:6; 12:12).

ಪಾರ್ಥನೆಯು ಬಹಿರಂಗ ಮತ್ತು ಪ್ರತ್ಯೇಕ ಆರಾಧನೆಯ ಅತ್ಯಂತ ಮುಖ್ಯವಾದ ಭಾಗವಾಗಿದೆ. ಪ್ರತಿಯೊಬ್ಬ ಕ್ರೆಸ್ತನು ಸತತವಾಗಿ ತನ್ನ ಪ್ರಾರ್ಥನಾ ಜೀವಿತದಲ್ಲಿ ಬೆಳೆಯಬೇಕು (ಮತ್ತಾಯ 6:5-15; 14:23; ಲೂಕ 5:16; ಅಪೊಸ್ತಲರ ಕೃತ್ಯ 10:9; 16:25).

ಬಹಿರಂಗ ಆರಾಧನೆಯು ಸಾಮಾನ್ಯವಾಗಿ ಸಭೆಯ ಪುರುಷರಿಂದ ನಡಿಸಲ್ಪಟ್ಟ ಅನೇಕ ಪ್ರಾರ್ಥನೆಗಳನ್ನು ಒಳಗೊಂಡಿರುತ್ತದೆ. “ಹೀಗಿರುವಾಗ ಪುರುಷರು ಎಲ್ಲಾ ಸ್ಥಳಗಳಲ್ಲಿ ಕೋಪವೂ ವಾಗ್ವಾದವೂ ಇಲ್ಲದವರಾಗಿ ಭಕ್ತಿಪೂರ್ವಕವಾಗಿಯೇ ಕೈಗಳನ್ನೆತ್ತಿ ಪ್ರಾರ್ಥಿಸಬೇಕೆಂದು ಅಪೇಕ್ಷಿಸುತ್ತೇನೆ” (1 ತಿಮೊಥೆ 2:8) ಎಂದು ಪೌಲನು ಬರೆದನು. “ಪುರುಷರು” ಎಂದು ಉಪಯೋಗಿಸಿದ ಪದದ ವಿಶೇಷವಾದ ಗ್ರೀಕ ಪದದ ಅರ್ಥ “ಮಹಿಳೆಯರಿಗೆ” ಎಂಬ ಪದಕ್ಕೆ ವಿರುದ್ಧವಾಗಿರುವ “ಪುರುಷ” ಎಂಬುದು. ಕೇವಲ ಪುರುಷರು ಮಾತ್ರವೇ ಬಹಿರಂಗ ಆರಾಧೆನೆಯಲ್ಲಿ ಪ್ರಾರ್ಥನೆಗಳನ್ನು ನಡಿಸ ಬೇಕು.

ನಿಜವಾಗಿ ಆರಾಧನೆಯು ನಡೆಯದೇ ಇದ್ದರೂ ಬಹಿರಂಗ ಪ್ರಾರ್ಥನೆಯು “ಯಾವುದು” ಎಂಬುದನ್ನು ಗಮನಿಸಬಹುದು. ಪ್ರಾರ್ಥನೆಯ ನಾಯಕನು ದೇವರ ಪ್ರಸನ್ನತೆಯ ಬಗ್ಗೆ ಅರುಹು ಉಳ್ಳವನಾಗಿರಬೇಕು. ಮನುಷ್ಯನ ಕಡೆಗಲ್ಲ ಆದರೆ ದೇವರ ಕಡೆಗೆ ತನ್ನ ಆಲೋಚನೆಗಳನ್ನಿಡಬೇಕು. ಪ್ರಾರ್ಥನೆಯಲ್ಲಿ ನಡಿಸಲ್ಪಡುವವರು ತಮ್ಮ ಹೃದಯಗಳಲ್ಲಿ ಪ್ರಾರ್ಥನೆಯನ್ನು ಪ್ರತಿಧ್ವನಿಸಿಕೊಳ್ಳಬೇಕು ಮತ್ತು ತಮ್ಮ ಸ್ವಂತ ಬಿನ್ನಹಗಳನ್ನು, ಕೃತಜ್ಞತೆಗಳನ್ನು ಕೂಡಿಸಿ ಕೊಳ್ಳಬೇಕು. ಆಗ ಅವರು “ಆಮೇನ್” ಎಂದು (ಗಟ್ಟಿಯಾಗಿ ಇಲ್ಲವೇ ತಮ್ಮ ಆಲೋಚನೆಗಳಲ್ಲಿ) ಹೇಳಬೇಕು (1 ಕೊರಿಂಥ 14:16; ನೋಡಿರಿ ಮತ್ತಾಯ 6:13; ರೋಮಾಪುರ 16:27; ಎಫೆಸ 3:21).[13]

## ಕೊಡುವಿಕೆ

ದೇವರಿಗೆ ಮೆಚ್ಚಿಗೆಯನ್ನು ಪ್ರಕಟಿಸುವ ಒಂದು ವಿಧಾನವು ಪ್ರತೀ ವಾರದ

ಮೊದಲನೆಯ ದಿನದಂದು ಕಾಣಿಕೆ[14] ಕೊಡುವುದು ಎಂಬುದನ್ನು ಕೊರಿಂಥದಲ್ಲಿಯ ಸಭೆಗೆ ಪೌಲನು ಹೇಳಿದನು,

> ಪರಿಶುದ್ಧರಿಗೋಸ್ಕರ ಹಣ ಶೇಖರಿಸುವುದನ್ನು ಕುರಿತು ನಾನು ಹೇಳುವ ದೇನಂದರೆ, ಗಲಾತ್ಯದ ಸಭೆಗಳಿಗೆ ನಾನು ಹೇಳಿಕೊಟ್ಟ ಕ್ರಮದಂತೆ ನೀವು ಮಾಡಿರಿ. ನಾನು ಬಂದಾಗ ಹಣ ವಸೂಲು ಮಾಡ ಬೇಕಾದ ಅವಶ್ಯವಾಗದಂತೆ ನಿಮ್ಮಲ್ಲಿ ಪ್ರತಿಯೊಬ್ಬನು ತನಗಾದ ಅಭಿವೃದ್ಧಿಗೆ ತಕ್ಕಂತೆ ಪ್ರತಿವಾರದ[15] ಮೊದಲನೆಯ ದಿನದಲ್ಲಿ ಪ್ರತ್ಯೇಕಿಸಿ, ಕೂಡಿಟ್ಟು ಕೊಂಡಿರಲಿ[16] (1 ಕೊರಿಂಥ 16:1, 2).

ಆರಾಧಕರು ತಮಗಿದ್ದ ಎಲ್ಲಾದರಲ್ಲಿ ಪ್ರತಿಶತ 10 ರಷ್ಟನ್ನು ಕೊಡಬೇಕೆಂದು ನಿರ್ದಿಷ್ಟವಾಗಿ ಹಳೇ ಒಡಂಬಡಿಕೆ ನೇಮಿಸಿತ್ತು. ಇದು "ದಶಮಾಂಶ" ಎಂದು ಕರೆಯಲ್ಪಟ್ಟಿತು (ಯಾಜಕಕಾಂಡ 27:30; ಧರ್ಮೋಪದೇಶಕಾಂಡ 14:22; ಮಲಾಕೀಯ 3:8-10). ಹೊಸ ಒಡಂಬಡಿಕೆಯ ಕ್ರೈಸ್ತರು ಕೊಡಬೇಕೆಂದು ನಿರ್ದಿಷ್ಟವಾದ ಮೊತ್ತದ ಬಗ್ಗೆ ಹೇಳುವದಿಲ್ಲ. ಸ್ವೇಚ್ಛೆಯಿಂದ, ಉದಾರವಾಗಿ, ಸಂತೋಷದಿಂದ (2 ಕೊರಿಂಥ 9:6, 7) ತಮ್ಮ ಆದಾಯಕ್ಕನುಗುಣವಾಗಿ ಕೊಡಬೇಕೆಂದು ಬೋಧಿಸುತ್ತದೆ (1 ಕೊರಿಂಥ 16:2; NIV). ದಶಮಾಂಶವನ್ನು ಇಲ್ಲವೇ ಅದಕ್ಕಿಂತ ಹೆಚ್ಚನ್ನು ಕೊಡುವ ಕ್ರೈಸ್ತರನ್ನು ನಾನು ತಿಳಿದಿದ್ದೇನೆ. ಆದರೆ ಅವರು ಇದನ್ನು ಕೃತಜ್ಞತೆಯಿಂದ ಮಾಡುತ್ತಾರೆಯೇ ಹೊರತು ಬಲಾತ್ಕಾರದಿಂದ ಮಾಡುವದಿಲ್ಲ.

ಒಬ್ಬನು "ಅಭಿವೃದ್ಧಿ ಹೊಂದಿದಂತೆ" ಕೊಡಬಹುದು ಹಾಗೂ ಆರಾಧಿಸದೇ ಇರಬಹುದು. ಆರಾಧಕನು ತನ್ನ ಕಾಣಿಕೆ ಕೊಡುವಾಗ ದೇವರ ಆಶೀರ್ವಾದಗಳಿಗಾಗಿ ಆತನಿಗೆ ಕೃತ್ಯಜ್ಞತೆ ಸಲ್ಲಿಸುತ್ತ ತನ್ನ ಕಾಣಿಕೆಯನ್ನು ಸ್ವೀಕರಿಸಬೇಕೆಂದು ದೇವರಿಗೆ ಪ್ರಾರ್ಥಿಸಬೇಕು.

**ಸಂಗೀತ**

ಆರಾಧನೆಯ ವ್ಯಕ್ತಪಡಿಸುವಿಕೆಯ ಐದನೆಯ ವಿಧಾನವು ಹಾಡುವಿಕೆಯಾಗಿದೆ. "ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ; ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶ ಮಾಡಿಕೊಳ್ಳಿರಿ, ಬುದ್ಧಿ ಹೇಳಿಕೊಳ್ಳಿರಿ; ಕರ್ತನ ಕೃಪೆಯನ್ನು ನೆನಸಿಕೊಳ್ಳುವವರಾಗಿ ಕೀರ್ತನೆಗಳಿಂದ ಸಂಗೀತಗಳಿಂದ ಆತ್ಮ ಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನ ಮಾಡಿರಿ" (ಕೊಲೊಸ್ಸೆ 3:16) ಎಂದು ಪೌಲನು ಕೊಲೊಸ್ಸೆಯ ಸಭೆಗೆ ಆಜ್ಞಾಪಿಸಿದ್ದಾನೆ. ಹಾಡುವಿಕೆಯ ನಮ್ಮ ಚರ್ಚೆಯನ್ನು ಮುಂದಿನ ಪಾಠದಲ್ಲಿ ಮುಂದುವರಿಸೋಣ. ಈ ವಚನವು ಆರಾಧನೆಯ "ಯಾವುದು" ಎಂಬುದನ್ನು ಒತ್ತಿ ಹೇಳುತ್ತದೆ: "ಒಬ್ಬರಿಗೊಬ್ಬರು ಉಪದೇಶ ಮಾಡಿಕೊಳ್ಳಿರಿ. ಬುದ್ಧಿ ಹೇಳಿಕೊಳ್ಳಿರಿ, ... ಕೀರ್ತನೆಗಳಿಂದಲೂ ಸಂಗೀತಗಳಿಂದಲೂ ಹಾಡುಗಳಿಂದಲೂ ದೇವರಿಗೆ ಗಾನ ಮಾಡಿರಿ." ಅದು ಆರಾಧನೆಯು "ಹೇಗೆ" ಎಂಬುದನ್ನು ಒತ್ತಿ ಹೇಳುತ್ತದೆ: "ಕರ್ತನ ಕೃಪೆಯನ್ನು ನಿಮ್ಮ ಹೃದಯಗಳಲ್ಲಿ ನೆನಸಿಕೊಳ್ಳುವವರಾಗಿರಿ."

# ಆರಾಧನೆಯ ಮುಖ್ಯತ್ವ

ಬಹಿರಂಗ ಆರಾಧನೆಯ ಬಗ್ಗೆ ಒತ್ತಿ ಹೇಳಿದದೊಂದಿಗೆ ಆರಾಧನೆಯ ಬಗೆಗಿನ ಹೊಸ ಒಡಂಬಡಿಕೆಯ ಬೋಧನೆಯನ್ನು ನಾವು ಚರ್ಚಿಸಿದ್ದೇವೆ. ಈಗ ನಾವು "ಆರಾಧನೆಗಾಗಿ ಕೂಡಿಬರುವುದು ಇಲ್ಲವೇ ಕೂಡಿಬರದೇ ಇರುವುದು ಯಾವುದೇ ಭಿನ್ನತೆ ಮಾಡುತ್ತದೋ?" ಎಂದು ಪ್ರಶ್ನಿಸುವ ಅಗತ್ಯತೆಯಿದೆ. ಕ್ರಮಪ್ರಕಾರವಾಗಿ ಆರಾಧನೆಗಳಲ್ಲಿ ಭಾಗವಹಿಸುವುದು ಮುಖ್ಯವಾದದ್ದಲ್ಲ ಎಂದು ಅನೇಕರು ಯೋಚಿಸುತ್ತಾರೆ. ಬೈಬಲು ಏನನ್ನು ಬೋಧಿಸುತ್ತದೆ? ಈ ವಿಷಯದ ಮೇಲೆ ದೇವರು ಮಾತಾಡಿದ್ದಾನೆಂಬುದನ್ನು ತಿಳಿದುಕೊಳ್ಳುವಾಗ ಕೆಲವರು ಆಶ್ಚರ್ಯಪಡುತ್ತಾರೆ.

ಇಬ್ರಿಯರಿಗೆ ಬರೆದ ಪತ್ರಿಕೆಯು ಒಮ್ಮೆ ನಂಬಿಗಸ್ಥರಾಗಿದ್ದ ಕ್ರೈಸ್ತರಿಗೆ ಬರೆಯಲ್ಪಟ್ಟಿದೆ (ಇಬ್ರಿಯ 10:32-34). ಕೆಲವೊಂದು ಕಾರಣದಿಂದ ಅವರು ಆಸಕ್ತಿಯಿಲ್ಲದವರೂ ಅಲಕ್ಷಿಸುವವರೂ ಆಗಿದ್ದರು (ಇಬ್ರಿಯ 2:3). ಇದು ಅವರು ಸಭೆಯ ಬಹಿರಂಗ ಕೂಟಗಳಲ್ಲಿ ಭಾಗವಹಿಸುವದನ್ನೂ ಒಳಗೊಂಡಿತ್ತು (10:25). "ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯ ಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ" ಎಂದು ಅವರಿಗೆ ಹೇಳಲ್ಪಟ್ಟಿತು (10:24). ಅವರು ಒಟ್ಟಾಗಿ ಕೂಡಿ ಬಂದಾಗ ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವದರಿಂದ ಇದನ್ನು ಮಾಡುವದು ಒಂದು ಮಾರ್ಗವಾಗಿದೆ. ಹೀಗೆ ಈ ವಚನಗಳನ್ನು ಓದುತ್ತೇವೆ: "*ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟುಬಿಡದೆ* ಒಬ್ಬರನ್ನೊಬ್ಬರು ಪ್ರೋತ್ಸಾಹಿಸೋಣ. ಆ ದಿನವು ಸಮೀಪಿಸುತ್ತಾಬರುತ್ತದೆ ಎಂದು ನೀವು ನೋಡುವುದರಿಂದ ಇದನ್ನು ಮತ್ತಷ್ಟು ಮಾಡಿರಿ" (10:25).[17] ಇಂದಿನ ಜನರಿಗೆ "ದಿನವು ಸಮೀಪಿಸುತ್ತಾ ಇದೆ" ಎಂಬುದು ಯೇಸುವಿನ ಎರಡನೆಯ ಬರೋಣವು.[18] ಕ್ರಿಸ್ತನು ಯಾವುದೇ ಸಮಯದಲ್ಲಿ ಬರಬಹುದು. ಆದುದರಿಂದ ನಾವು ಯಾವಾಗಲೂ ಸಿದ್ಧರಾಗಿರಬೇಕಾಗಿದೆ (ಮತ್ತಾಯ 25:13).

ಸಾಮಾನ್ಯವಾಗಿ ಭಾಗವಹಿಸುವದರಲ್ಲಿ ಕ್ರಮವಿಲ್ಲದವರು ತಮ್ಮ ಕ್ರೈಸ್ತ ಜೀವಿತದ ಇತರ ಕ್ಷೇತ್ರಗಳಲ್ಲಿಯೂ ಕ್ರಮವಿಲ್ಲದವರಾಗಿರುವರು. ಇದಕ್ಕೆ ವಿರುದ್ಧವಾಗಿ ಇಬ್ರಿಯ 10:26-31 ಎಚ್ಚರಿಕೆ ಕೊಡುತ್ತದೆ:

> ಯಾಕಂದರೆ ಸತ್ಯದ ಪರಿಜ್ಞಾನವನ್ನು ನಾವು ಹೊಂದಿದ ಮೇಲೆ ಬೇಕೆಂದು ಪಾಪ ಮಾಡಿದರೆ ಪಾಪಪರಿಹಾರಕ್ಕಾಗಿ ಇನ್ನಾವ ಯಜ್ಞವೂ ಇರುವುದಿಲ್ಲ, ಅತ್ಯಂತ ಭಯದಿಂದ ಎದುರು ನೋಡತಕ್ಕ ನ್ಯಾಯ ತೀರ್ಪು ದೇವರ ವಿರೋಧಿಗಳನ್ನು ದಹಿಸುವ ತೀಕ್ಷ್ಣವಾದ ಅಗ್ನಿಯೂ ಇವೇ ನಮ್ಮ ಮುಂದೆ ಇರುವವು. ಮೋಶೆಯ ವಿಧಿಗಳನ್ನು ಅಸಡ್ಡೆ ಮಾಡಿದವನಿಗೆ ಇಬ್ಬರು ಇಲ್ಲವೆ ಮೂವರು ಸಾಕ್ಷಿಗಳ ಮಾತಿನ ಮೇಲೆ ಕನಿಕರವಿಲ್ಲದೆ ಮರಣ ದಂಡನೆ ಆಗುತ್ತದಷ್ಟೇ. ಯಾವನು ದೇವಕುಮಾರನನ್ನು ತುಳಿದು ಒಡಂಬಡಿಕೆಯನ್ನು ಸ್ಥಿರಪಡಿಸಿದಂಥ ತನ್ನನ್ನು ಪವಿತ್ರ ಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾ ವರವಾ ಗಿರುವ ಆತ್ಮವನ್ನು ತಿರಸ್ಕಾರ ಮಾಡಿದ್ದಾನೋ. ಅವನು ಇನ್ನೂ ಎಷ್ಟೋ ಕ್ರೂರ ವಾದ ದಂಡನೆಗೆ ಪಾತ್ರನಾಗಬೇಕೆಂಬುದನ್ನು ಯೋಚಿಸಿರಿ. ಮುಯ್ಯಿಗೆ ಮುಯ್ಯಿ ತೀರಿಸುವುದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನೆಂದು ಹೇಳಿದಾತನನ್ನು ಬಲ್ಲೆವು; ಇದಲ್ಲದೆ ಕರ್ತನು ತನ್ನ ಜನರ ನ್ಯಾಯವನ್ನು ವಿಚಾರಿಸುವನೆಂತಲೂ ಹೇಳಿಯದೆ. ಜೀವವುಳ್ಳ ದೇವರ ಕೈಯಲ್ಲಿ ಸಿಕ್ಕಿ ಬೀಳುವುದು ಭಯಂಕರವಾದದ್ದು.

ಪ್ರತಿವಾರದ ಮೊದಲನೆಯ ದಿನದಂದು ಕರ್ತನ ಭೋಜನದಲ್ಲಿ ಕ್ರೈಸ್ತರು ಪಾಲುಗಾರರಾಗಬೇಕೆಂದು ನಾವು ಪರಿಶುದ್ಧ ಬರಹಗಳಲ್ಲಿ ಓದಿದ್ದೇವೆ. ಭಕ್ತಿವೃದ್ಧಿಗಾಗಿಯೂ ಅನ್ಯೋನ್ಯತೆಗಾಗಿಯೂ ಹೆಚ್ಚಾದ ಸಭೆಗಳಲ್ಲಿ ವಾರದಲ್ಲಿ ಇತರ ಸಮಯಗಳಲ್ಲಿಯೂ ಕ್ರಮವಾದ ಕೂಟಗಳಿರುತ್ತವೆ. ಕ್ರಿಸ್ತನಿಗೆ ತನ್ನ ಜೀವಿತವನ್ನು ಕೊಟ್ಟವನು ತನಗೆ ಸಾಧ್ಯವಾದ ಮಟ್ಟಿಗೆ ಇವೆಲ್ಲವುಗಳಲ್ಲಿ ಭಾಗವಹಿಸುವನು. ಅವು ಕ್ರೈಸ್ತ ಬೆಳವಣಿಗೆಯನ್ನು ಹೆಚ್ಚಿಸುತ್ತವೆ ಮತ್ತು ನಿಜವಾಗಿಯೂ ಮುಖ್ಯವಾದವುಗಳ ಮೇಲೆ ಕೇಂದ್ರೀಕರಿಸಲು ಸಹಾಯ ಮಾಡುತ್ತವೆ.

## ಮುಕ್ತಾಯ

ಯಾವುದೇ ಧಾರ್ಮಿಕ ಗುಂಪನ್ನು ಪರೀಕ್ಷಿಸುವಲ್ಲಿ ಉಪಯೋಗಿಸಲು ಪ್ರಶ್ನೆಗಳನ್ನು ರೂಪಿಸಲು ಆರಾಧನೆಯ ಮೇಲೆ ಹೊಸ ಒಡಂಬಡಿಕೆಯ ಬೋಧನೆಯನ್ನು ಕುರಿತು ಸಾಕಷ್ಟು ನೀವು ಕಲಿತುಕೊಂಡಿದ್ದೀರಿ. ಉದಾಹರಣೆಯಾಗಿ, “ಪ್ರತೀ ವಾರದ ಮೊದಲನೆಯ ದಿನದಂದು ಕರ್ತನ ಭೋಜನವು ಇರಬೇಕೋ?” “ಅವರ ಪ್ರಸಂಗಿಗಳು ದೇವರ ವಾಕ್ಯದ ನಂಬಿಗಸ್ಥ ಬೋಧಕರಾಗಿರುವರೋ?” “ಪುರುಷರು ಮಾತ್ರವೇ ಆರಾಧನೆಯನ್ನು ನಡಿಸುವರೋ?” ಎಂದು ನೀವು ಕೇಳಬಹುದು.

ನೀವು ಪರೀಕ್ಷೆಯನ್ನು ಮಾಡುತ್ತಿರುವಂತೆ ನಿಮ್ಮ ಸ್ವಂತ ಹೃದಯದ ವೈಯಕ್ತಿಕ ಪರೀಕ್ಷೆಯನ್ನು ಅಲಕ್ಷಿಸಬೇಡಿರಿ. “ಕ್ರೈಸ್ತರೊಂದಿಗೆ ದೇವರನ್ನು ಆರಾಧಿಸುವಲ್ಲಿ ನಾನು ಸಂತೋಷಿಸುತ್ತೇನೋ?”; “ಸಭಾಕೂಟಕ್ಕೆ ನಾನು ಬರುವಾಗ, ನಾನು ಆರಾಧಿಸಲು ಸಿದ್ಧನಾಗಿರುವೆನೋ?” “ನಾನು ಅಲ್ಲಿ ಇರುವಾಗ ನಿಜವಾಗಿಯೂ ಆರಾಧಿಸುವೆನೋ?” ಎಂದು ನಿಮ್ಮನ್ನು ಕೇಳಿಕೊಳ್ಳಿರಿ.[19] ಇವು ಮುಖ್ಯವಾದ ಪ್ರಶ್ನೆಗಳಾಗಿವೆ.

---

ಟಿಪ್ಪಣಿಗಳು

[1]ಪ್ರೇರೇಪಿಸಲ್ಪಡದ ಆದಿ ಕ್ರೆಸ್ತ ಬರಹಗಾರರು ಯೋಹಾನನು “ಕರ್ತನ ದಿನ” ಎಂಬ ಮಾತುಗಳನ್ನು ಉಪಯೋಗಿಸಿದಾಗ ವಾರದ ಮೊದಲನೆಯ ದಿನದ ಬಗ್ಗೆ ಮಾತಾಡುತ್ತಿದ್ದನೆಂದು ಅವರು ದೃಢಪಡಿಸಿದ್ದಾರೆ. [2]ಯೆಹೂದ್ಯರಿಗೆ “Passover” ಪಸ್ಕಹಬ್ಬ ಎಂದು ಕರೆಯಲ್ಪಟ್ಟ ಹಬ್ಬವಿದ್ದು ಅದು ದೇವರು ಐಗುಪ್ತರ ಮೇಲೆ ಬಾಧೆಯನ್ನು ತಂದಾಗ ಅವರ ಮನೆಗಳನ್ನು “ದಾಟಿ ಹೋದದ್ದನ್ನು” ಜ್ಞಾಪಿಸಿಕೊಳ್ಳುವದಕ್ಕಾಗಿತ್ತು (ವಿಮೋಚನಕಾಂಡ 12 ನೋಡಿರಿ). [3]ವೈಯಕ್ತಿಕ ಯೋಗ್ಯತೆಯ ಮೇಲೆ ಒತ್ತಿ ಹೇಳಿರಲಿಲ್ಲ (ಭಾಗವಹಿಸುವವರು ಯಾರು ಯೋಗ್ಯರಲ್ಲ). ಆದರೆ ಒಬ್ಬನು ಭಾಗವಹಿಸುವದರಲ್ಲಿಯ ರೀತಿಯ ಮೇಲಿತ್ತು. “ಅಯೋಗ್ಯವಾಗಿ” ಭಾಗವಹಿಸುವುದು ಅವರು ಭಾಗವಹಿಸುತ್ತಿದ್ದಂತೆ ಯೇಸುವಿನ ಯಜ್ಞವನ್ನು ಕುರಿತು ಯೋಚಿಸುತ್ತಿದ್ದಿಲ್ಲ ಎಂಬುದನ್ನು ಸೂಚಿಸುತ್ತದೆ. [4]ಮತ್ತಾಯ 26-29; ಮಾರ್ಕ 14:22-25; ಲೂಕ 22:19, 20 ನೋಡಿರಿ. [5]ಪಸ್ಕ ಭೋಜನದಲ್ಲಿ ಹುಳಿಯಿಲ್ಲದ ರೊಟ್ಟಿ ಮಾತ್ರವೇ ಉಪಯೋಗಿಸಲ್ಪಟ್ಟಿತು (ವಿಮೋಚನ ಕಾಂಡ 12:15 ನೋಡಿರಿ). [6]ಮತ್ತಾಯ 26:29; ಮಾರ್ಕ 14:25; ಲೂಕ 22:18 ನೋಡಿರಿ. ಇಂದು “fruit of the vine” (ದ್ರಾಕ್ಷಾರಸ) ಎಂಬುದು ವಿವಿಧ ರಸಗಳಿಗೆ ಸಂಬಂಧಿಸಿ ಉಪಯೋಗಿಸಲ್ಪಡುವುದು. ಆದರೆ ಆ ಸಮಯದಲ್ಲಿ ಮತ್ತು ಸ್ಥಳದಲ್ಲಿ ದ್ರಾಕ್ಷಾರಸ ಎಂದು ಕರೆಯಲ್ಪಟ್ಟಿತು. [7]ಕೆಲವು ಧಾರ್ಮಿಕ ಸಂಸ್ಥೆಗಳಲ್ಲಿ ಆಯಲ್ಪಟ್ಟ ಕೆಲವರು ಮಾತ್ರವೇ ರಸವನ್ನು ಸ್ವೀಕರಿಸುತ್ತಾರೆ. ಉಳಿದವರು ಕೇವಲ ರೊಟ್ಟಿಯನ್ನು ಸ್ವೀಕರಿಸುತ್ತಾರೆ. ಇದು ಹೊಸ ಒಡಂಬಡಿಕೆಯ ವಿಧಾನಕ್ಕೆ ವ್ಯತಿರೇಕವಾದದ್ದಾಗಿದೆ. [8]NASBಯಲ್ಲಿ “ಹಂಚಿಕೊಳ್ಳುವುದು”

ಎಂದಿದೆ. [9]ಹೊಸ ಒಡಂಬಡಿಕೆಯಲ್ಲಿ "ರೊಟ್ಟಿ ಮುರಿಯುವುದು" ಎಂಬ ಮಾತುಗಳು ಸಾಮಾನ್ಯ ಊಟಕ್ಕೂ ಸಂಬಂಧಿಸುತ್ತದೆ. ಸಾಮಾನ್ಯ ಊಟ ಇಲ್ಲವೇ ಕರ್ತನ ಭೋಜನ ಎಂಬ ಅರ್ಥ ವನ್ನು ಸಂದರ್ಭವು ತೀರ್ಮಾಣಿಸುತ್ತದೆ. [10]ಪೌಲನು ನಿಶ್ಚಿತವಾಗಿ ಏನನ್ನು ಹೇಳಿದನೆಂಬುದು ನಮಗೆ ತಿಳಿದಿರುವದಿಲ್ಲ. ಆದರೆ ದೇವರ ವಾಕ್ಯವು ಯಾವಾಗಲೂ ಅವನ ತುಟಿಗಳ ಮೇಲಿ ತ್ತೆಂದು ನಾವು ಬಲ್ಲೆವು. ಅದೇ ಪ್ರಯಾಣದ ಸಮಯದಲ್ಲಿ ಇತರ ಕ್ರೈಸ್ತರಿಗೆ ಅವನು ಏನು ಹೇಳಿ ದನು ಎಂಬುದರ ಉದಾಹರಣೆಗಾಗಿ ಅಪೊಸ್ತಲರ ಕೃತ್ಯ 20:31, 32 ನೋಡಿರಿ.

[11]ಬೈಬಲು ದೇವರಿಂದ ಬಂದದ್ದೆಬುದನ್ನು ಪ್ರಸಂಗಿಯು ಮೊದಲು ನಂಬತಕ್ಕದ್ದೆಂದು ನಾವು ಹೇಳಬೇಕಾಗಿಲ್ಲ. ಬೈಬಲಿನ ದೈವ ಪ್ರೇರಣೆಯಲ್ಲಿ ನಂಬದೇ ಇರುವ ಜನರಿಂದ ಕೆಲವು ಸಭಾ ಪಂಗಡಗಳ ಪ್ರಸಂಗ ಪೀಠಗಳು ತುಂಬಿಕೊಂಡಿರುವುದು ದುರ್ದೈವದ ಸಂಗತಿ. [12]1 ತಿಮೊಥೆ 2:8, 11, 12 ನೋಡಿರಿ. ಕೆಲವು ಪರಿಸ್ಥಿತಿಗಳಲ್ಲಿ ಮಹಿಳೆಯರಿಗೆ ಬೋಧಿಸಲು ಹೊಸ ಒಡಂಬಡಿಕೆಯು ಅಪ್ಪಣೆ ಕೊಡುತ್ತದೆ (ಅಪೊಸ್ತಲರ ಕೃತ್ಯ 18:26) ಆದರೆ ಸಭೆಯು ಆರಾಧನೆಗಾಗಿ ಕೂಡಿಬರುವಾಗ ಮಹಿಲೆಯರು ಬೋಧಿಸ ಬಾರದು ಇಲ್ಲವೇ ಪ್ರಸಂಗಿಸ ಬಾರದು. [13]"ಆಮೆನ್" ಎಂಬುದರ ಸರಳವಾದ ಅರ್ಥ "ಹಾಗೆಯೇ ಆಗಲಿ." ಅದು "ಪ್ರಾರ್ಥನೆಯನ್ನು ಅಂತ್ಯಮಾಡುವ" ಸಾಧರಣ ಪದವಲ್ಲ. ಉದಾಹರಣೆಯಾಗಿ ಪ್ರಸಂಗಿಯೂ ಹೇಳಿದ್ದರೊಂದಿಗೆ ನೀವು ಒಪ್ಪಿಕೊಂಡರೆ ಇದನ್ನು ನೀವು "ಆಮೆನ್" ಎಂದು ಹೇಳುವದರಿಂದ ಸೂಚಿಸಬಹುದು. [14]ಇದು ಸಾಮಾನ್ಯವಾಗಿ ಹಣದ ಕೊಡುಗೆಯಾಗಿರುವುದು. ಆದರೆ ಇದು ಇತರ ವಸ್ತುಗಳ ಕೊಡುಗೆಯೂ ಆಗಿರಬಹುದು. [15]ಮೊದಲು ಓದುವಾಗ, ಇದು ಪ್ರತಿಯೊಬ್ಬ ಕ್ರೈಸ್ತನೂ ತನ್ನ ಹಣವನ್ನು ಪ್ರತ್ಯೇಕಿಸಿಡಬೇಕೆಂಬಂತೆ ತೋರುತ್ತದೆ. ಪೌಲನು ಬಂದಾಗ ಕಾಣಿಕೆ ಕೂಡಿಸುವದನ್ನು ತಪ್ಪಿಸಲು ಪ್ರಯತ್ನಿಸುವದಕ್ಕೆ ಇದು ಅವಶ್ಯವಾಗಿತ್ತು. ಇದು ಸಭೆಯು ಮಾಡಬೇಕಾಗಿದ್ದ "ಕೂಡಿಸುವಿಕೆಯಾಗಿತ್ತು" (ವ. 1). ಆದರಿಂದ ಪೌಲನು ಬಂದಾಗ "ಕಾಣಿಕೆ ಕೂಡಿಸುವ" ಅಗತ್ಯತೆಯಿರುವದಿಲ್ಲ (ವ. 2). ಆದುದರಿಂದ "ತೆಗದಿಟ್ಟು ಉಳಿತಾಯ ಮಾಡುವ" ಪ್ರಯತ್ನವು ಹುದುವಾದ ನಿಧಿಯೊಳಗೆ (ಕೆಲವು ಸಲ ಇದು "ಸಭೆಯ ಖಜಾನೆ" ಎಂದು ಕರೆಯಲ್ಪಟ್ಟಿದೆ) ಸಂಗ್ರಹಿಸುವುದು ಬಹಿರಂಗ ಸಭೆಯ ಕಾರ್ಯವಾಗಿರುವುದು. [16]"As he may prosper" ಎಂಬುದು ಅವನು ಸಂಪಾದಿಸುವದಕ್ಕೆ ಸಂಬಂಧಿಸಿದೆ. ನಾವು ಇಂದು ಉಪಯೋ ಗಿಸುವಂತೆ "ಸಮೃದ್ಧಿಯುಳ್ಳವರು" ಆಗಿರದಿದ್ದರೂ ಬೈಬಲ್ ಅರ್ಥದಲ್ಲಿ ನೀವು "ಸಮೃದ್ಧಿ" ಹೊಂದಿರಬಹುದು. [17]ಸ್ಪಷ್ಟೀಕರಣವು ನನ್ನದು. [18]ಇಬ್ರಿಯರಿಗೆ ಬರೆದ ಪತ್ರಿಕೆಯ ಮೂಲ ಓದುಗರಿಗೆ ಈ "ದಿನ"ವು ಯೆರೂಸಲೇಮಿನ ನಾಶನಕ್ಕೆ ಸಂಬಂಧಿಸಿತ್ತೆಂದು ಕೆಲವರು ಹೇಳು ತ್ತಾರೆ. [19]ಚಿಕ್ಕಮಕ್ಕಳ ತಾಯಂದಿರಿಗೆ ಒಂದು ವಿಶೇಷ ಟಿಪ್ಪಣೆಯನ್ನು ಕೂಡಿಸಬೇಕು: ನಿಮ್ಮ ಮಕ್ಕಳು ಚಿಕ್ಕವರಿರುವಾಗ ಆರಾಧನೆ ಮಾಡುವುದು ಕಷ್ಟಕರವಾಗುವುದು. ಆದರೆ ಇದು ನಂಬಿಗಸ್ಥ ಭಾಗವಹಿಸುವಿಕೆಯು ಕದಲದಂತೆ - ಮಾಡಲಿ. ದೇವರು ಅರ್ಥ ಮಾಡಿಕೊಳ್ಳು ವನು. ನೀವು ನಿಮ್ಮ ಮಕ್ಕಳನ್ನು "ಕರ್ತನಿಗೆ ಮೆಚ್ಚಿಕೆಯಾಗಿರುವ ಬಾಲ ಶಿಕ್ಷೆಯನ್ನೂ ಬಾಲೋಪ ದೇಶವನ್ನೂ ಮಾಡುತ್ತಾ ಇರಿ" (ಎಫೆಸೆ 6:4).

© 2009 Truth for Today